<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>

**ಸಿ.ಸಿ : 1/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಎಂ ಭಾಗ್ಯಮ್ಮ | ಸಿ.ಡಬ್ಲ್ಯೂ - 04 |
| ಗಂಡನ ಹೆಸರು | : ಎಂ ಆರ್ ನಟರಾಜ್ | ಪಿ.ಡಬ್ಲ್ಯೂ - 03 |
| ವಯಸ್ಸು | : 59 ವರ್ಷ | |
| ಉದ್ಯೋಗ | : ಮುನಿಸಿಪಾಲ್ ತಹಶೀಲ್ದಾರರು | |
| ವಾಸಸ್ಥಳ | : ತುಮಕೂರು | |

**ದಿನಾಂಕಃ 27.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>:: ಮುಖ್ಯ ವಿಚಾರಣೆ : ಮಾನ್ಯ : ಎಪಿಪಿಯವರಿಂದ ::</u>**

ಚಾಸಾ 1, 5 ರಿಂದ 7 ನನಗೆ ಗೊತ್ತು. ನಾನು ದಿಃ 01/12/2018 ರಿಂದ 25/02/2019 ರವರೆಗೆ ಶೃಂಗೇರಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈಗ ಸುಮಾರು 5 ವರ್ಷಗಳ ಹಿಂದೆ ಶೃಂಗೇರಿ ಜೆ.ಎಂ.ಎಫ್.ಸಿ., ನ್ಯಾಯಾಲಯದಿಂದ ಶೃಂಗೇರಿ ತಾಲ್ಲೂಕು ಸರ್ವೇ ನಂಬರ್ 215 ರ 2 ಗುಂಟೆಯಲ್ಲಿ ಸ್ಥಳ ಪರಿಶೀಲನೆ ಮಾಡಿ ನಕಾಶನೆ ತಯಾರಿಸಿ ನೀಡುವಂತೆ ಪತ್ರ ಬಂದಿದ್ದು, ಈ ಸಂಬಂಧ ನಾನು ಚಾಸಾ 5 ಮತ್ತು 6 ರವರು ಹಾಗೂ ಬೇರೆ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಚಾಸಾ 5 ರವರು ನಮ್ಮ ಸಮಕ್ಷಮ ನಕಾಶೆ ತಯಾರಿಸಿ ತಾಲ್ಲೂಕು ಕಚೇರಿಗೆ ಸಲ್ಲಿಸಿರುತ್ತಾರೆ. ಈ ಸಂಬಂಧ ಪೋಲಿಸರು ನನ್ನನ್ನು ವಿಚಾರಿಸಿದ್ದು, ನಾನು ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು ನಕಾಶೆ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸ್ ಟಿ ವಕೀಲರಿಂದ :</u>**

ನಾನು ನನ್ನ ಹೇಳಿಕೆಯಲ್ಲಿ **"ಶೃಂಗೇರಿ ಗ್ರಾಮ ಸರ್ವೇ ನಂಬರ್ 215 ರಲ್ಲಿ 0.02 ಗುಂಟೆ ಅನಾಧಿಕೃತವಾಗಿ ಒತ್ತುವರಿ ಆಗಿದೆ ಎಂಬ ದೂರಿನ ಅನ್ವಯ"** ಎಂದು ನಾನು ಹೇಳಿಕೆ

ಕೊಟ್ಟಿರುವುದಿಲ್ಲ. ಹೇಳಲಾದ ನಕಾಶೆಗೆ ನಿಪಿ 8 ರಲ್ಲಿ ಸಹಿ ಮಾಡಿರುವುದನ್ನು ಬಿಟ್ಟು ಬೇರೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಕಚೇರಿಗೆ ಯಾವುದೇ ದೂರು ಬಂದರೆ ಅದಕ್ಕೆ ಒಂದು ಸಂಖ್ಯೆ ನೀಡಿ ಕಡತವನ್ನು ನಿರ್ವಹಿಸುತ್ತೇವೆ ಎಂದರೆ ಸರಿ. ಸದರಿ ದೂರಿಗೆ ಸಂಬಂಧಿಸಿ ಯಾವುದೇ ದಾಖಲೆಗಳು ಅಥವಾ ಪತ್ರಗಳು ನೀಡಬೇಕಾದರೆ ಸಂಖ್ಯೆಯನ್ನು ನಮೂದು ಮಾಡಿ ನೀಡುತ್ತೇವೆ ಎಂದರೆ ಸರಿ. ನಾನು ಚಾಸಾ 5 ರವರಿಗೆ ಪತ್ರ ಮುಖೇನ ನಕಾಶೆ ಮಾಡಲು ನೇಮಕ ಮಾಡಿರುತ್ತೇನೆ. ಸದರಿ ಪತ್ರಕ್ಕೆ ಸಂಖ್ಯೆ ನೀಡಿರುತ್ತೇವೆ. ನಕಾಶೆ ಮಾಡುವ ಮುಂಚಿತವಾಗಿ ಉಭಯ ಪಕ್ಷಗಾರರಿಗೆ ನೋಟಿಸ್ ನೀಡಬೇಕೆಂದರೆ ಸರಿ. ಸಾಕ್ಷಿ ಮುಂದುವರೆದು ತುರ್ತಾಗಿರುವುದರಿಂದ ನೋಟಿಸ್ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಚಾಸಾ 5 ರವರಿಗೆ ನಕಾಶೆ ಮಾಡಿಕೊಡಲು ಕಾಲವಧಿ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ತುರ್ತಾಗಿರುವುದರಿಂದ ಕಾಲವಕಾಶ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಕೆಲಸಗಾರರು ಕೆಲಸ ಮಾಡುವ ಬಗ್ಗೆ ಮಾಹಿತಿ ಇರುವುದಿಲ್ಲ, 5 ವರ್ಷ ಆಗಿರುತ್ತದೆ ಈಗ ನನಗೆ ನೆನಪಿಲ್ಲ. ಚಾಸಾ 5 ಸ್ಥಳದಲ್ಲಿ ಕಚ್ಚಾ ನಕಾಶೆ ಹಾಕಿರುತ್ತಾರೆ. ಸದರಿ ಕಚ್ಚಾ ನಕಾಶೆ ನಾನು ಸಹಿ ಮಾಡಿರುವುದಿಲ್ಲ. ಪಕ್ಕಾ ನಕಾಶೆಯನ್ನು ಯಾವಾಗ ಕಚೇರಿಗೆ ತಂದುಕೊಟ್ಟಿರುತ್ತಾರೆ ಈಗ ನನಗೆ ನೆನಪಿಲ್ಲ. ಪಕ್ಕಾ ನಕಾಶೆಗೆ ನಾನು ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ, ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 27.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**